**ಕರ್ನಾಟಕ ಸರ್ಕಾರ**
ಗ್ರಾಮೀಣಾಭಿವೃದ್ಧಿ ಆಯುಕ್ತಾಲಯ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ
ಫ್ಲಾಟ್ ನಂ.1-4, ಕೆ.ಎಸ್.ಐ.ಐ.ಡಿ.ಸಿ, ಐ.ಟಿ.ಪಾರ್ಕ್, 5ನೇ ಮಹಡಿ,
ಸೌತ್ ಬ್ಲಾಕ್, ರಾಜಾಜಿನಗರ ಇಂಡಸ್ಟ್ರಿಯಲ್ ಎಸ್ಟೇಟ್ ಬೆಂಗಳೂರು-560010
ದೂರವಾಣಿ ಸಂಖ್ಯೆ:080-22322738, ಇ-ಮೇಲ್:nrega@karnataka.gov.in

No:RDC-EGS/328/2022(E-756987) ದಿನಾಂಕ:22-04-2022

## ಅಧಿಕೃತ ಜ್ಞಾಪನ

**ವಿಷಯ:** ಮಹಾತ್ಮಗಾಂಧಿ ನರೇಗಾ ಯೋಜನೆಯಡಿ ಮಹಿಳಾ ಸ್ವ-ಸಹಾಯ ಗುಂಪುಗಳ ಒಕ್ಕೂಟಗಳಿಗೆ ಕಾಮನ್ ವರ್ಕ್‌ಶೆಡ್ ನಿರ್ಮಾಣ ಮಾಡುವ ಕುರಿತು.

**ಉಲ್ಲೇಖ:** 2022-23ರ ಆಯವ್ಯಯದಲ್ಲಿ ಮಾನ್ಯ ಮುಖ್ಯಮಂತ್ರಿಗಳು ಘೋಷಿಸಿರುವಂತೆ.

*******

ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯ ಕಾರ್ಯಕ್ರಮಗಳನ್ನು ಸರ್ಕಾರದ ಇತರೇ ಇಲಾಖೆ/ಸಂಸ್ಥೆಗಳೊಂದಿಗೆ ಒಗ್ಗೂಡಿಸಿ ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ಬಹು ಉಪಯೋಗ/ಬಳಕೆಯ ಶಾಶ್ವತವಾದ ಆಸ್ತಿಯನ್ನು ಸೃಜಿಸುವ ಉದ್ದೇಶ ಹೊಂದಲಾಗಿದೆ. ಸಂಜೀವಿನಿ-ಕೆಎಸ್‌ಆರ್‌ಎಲ್‌ಪಿಎಸ್ ಅಡಿ ಮಹಿಳಾ ಸ್ವ-ಸಹಾಯ ಗುಂಪು/ಗ್ರಾಮ ಪಂಚಾಯತಿ ಮಟ್ಟದ ಒಕ್ಕೂಟದ ಮೂಲಕ ಅನುಷ್ಠಾನಗೊಳಿಸುತ್ತಿರುವ ಸಮುದಾಯ ಬಂಡವಾಳ ನಿಧಿ, ಬ್ಯಾಂಕಿನ ಸಾಲ ಹಾಗೂ ಸರ್ಕಾರದ ಇತರೆ ಯೋಜನೆಗಳಿಂದ ಹಣಕಾಸು ನೆರವು ಪಡೆದು, ಹೈನುಗಾರಿಕೆ, ಕೃಷಿ ಮತ್ತು ಕೃಷಿಯೇತರ ಜೀವನೋಪಾಯ ಚಟುವಟಿಕೆಯಂತಹ ಆದಾಯೋತ್ಪನ್ನ ಚಟುವಟಿಕೆಗಳನ್ನು ಗುಂಪು/ವೈಯಕ್ತಿಕವಾಗಿ ಹಮ್ಮಿಕೊಳ್ಳಲು ಅನುಕೂಲವಾಗುವಂತೆ ಮಹಿಳಾ ಸ್ವ-ಸಹಾಯ ಗುಂಪುಗಳಿಗೆ ಪಂಚಾಯತಿ ವ್ಯಾಪ್ತಿಯಲ್ಲಿ ಕಾಮನ್ ವರ್ಕ್‌ಶೆಡ್ ನಿರ್ಮಾಣ ಮಾಡಲು ಆಯವ್ಯಯದಲ್ಲಿ ಘೋಷಿಸಲಾಗಿದೆ.

ಅದರಂತೆ ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ಸಂಜೀವಿನಿಯಿಂದ ರಚಿಸಿರುವ ಗ್ರಾಮ ಪಂಚಾಯತಿ ಮಟ್ಟದ ಒಕ್ಕೂಟಗಳಿಗೆ ನೆರವು ನೀಡಲು ನರೇಗಾ ಯೋಜನೆಯಡಿ 750 ವರ್ಕ್‌ಶೆಡ್ ನಿರ್ಮಾಣ ಮಾಡಲು ಅನುಬಂಧದಲ್ಲಿ ಲಗತ್ತಿಸಿದಂತೆ ಜಿಲ್ಲಾವಾರು ಗುರಿ ನಿಗದಿಪಡಿಸಿ ಈ ಕೆಳಕಂಡ ಷರತ್ತುಗಳಿಗೆ ಒಳಪಟ್ಟು ಅನುಷ್ಠಾನಗೊಳಿಸಲು ಆದೇಶಿಸಲಾಗಿದೆ.

**ಷರತ್ತುಗಳು:**

1) ವರ್ಕ್‌ಶೆಡ್ ನಿರ್ಮಾಣ ಕಾಮಗಾರಿಗಳನ್ನು ನೋಂದಾಯಿತ ಜಾಬ್‌ಕಾರ್ಡ್ ಹೊಂದಿರುವ ಕೂಲಿಕಾರರಿಂದ ಮಾತ್ರ ನಿರ್ವಹಿಸತಕ್ಕದ್ದು ಮತ್ತು ಯೋಜನೆಯಡಿ ಅನುಮತಿಸಲ್ಪಟ್ಟ ಯಂತ್ರಗಳನ್ನು ಹೊರತುಪಡಿಸಿ ಇತರೆ ಯಾವುದೇ ಯಂತ್ರಗಳನ್ನು ಬಳಸತಕ್ಕದ್ದಲ್ಲ.

2) ವರ್ಕ್‌ಶೆಡ್ ನಿರ್ಮಾಣ ಕಾಮಗಾರಿಗಳು ಕಡ್ಡಾಯವಾಗಿ ಗ್ರಾಮ ಸಭೆಯಲ್ಲಿ ಅನುಮೋದನೆಯಾಗಿರಬೇಕು.

3) ಗ್ರಾಮ ಪಂಚಾಯತಿಗಳು ಈಗಾಗಲೇ 2022-23ನೇ ಸಾಲಿನ ನರೇಗಾ ಯೋಜನೆಯ ಕ್ರಿಯಾಯೋಜನೆಯಲ್ಲಿ ಜಿಲ್ಲೆಗೆ ನಿಗದಿಪಡಿಸಿದ ಸಂಖ್ಯೆಯಷ್ಟು ವರ್ಕ್‌ಶೆಡ್ ನಿರ್ಮಾಣ ಕಾಮಗಾರಿಗಳನ್ನು ಅಳವಡಿಸಿಕೊಳ್ಳದೇ ಇದ್ದಲ್ಲಿ, ಹೆಚ್ಚುವರಿ ಕ್ರಿಯಾಯೋಜನೆಗಳನ್ನು ತಯಾರಿಸಿ ವರ್ಕ್‌ಶೆಡ್ ನಿರ್ಮಾಣ ಕಾಮಗಾರಿಗಳನ್ನು ಅಳವಡಿಸಿಕೊಳ್ಳುವುದು ಮತ್ತು ಜಿಲ್ಲಾ ಪಂಚಾಯತಿಯು ಅಂತಹ ಹೆಚ್ಚುವರಿ ಕ್ರಿಯಾಯೋಜನೆಗಳನ್ನು ತಕ್ಷಣವೇ ಅನುಮೋದಿಸತಕ್ಕದ್ದು.

Scanned with CamScanner

4) ವರ್ಕ್‌ಶೆಡ್ ನಿರ್ಮಾಣ ಕಾಮಗಾರಿಗಳನ್ನು ಅನುಷ್ಠಾನಗೊಳಿಸುವಲ್ಲಿ ಯೋಜನೆಯ ಇತರ ಮಾರ್ಗಸೂಚಿಗಳನ್ನು ಕಡ್ಡಾಯವಾಗಿ ಪಾಲಿಸತಕ್ಕದ್ದು.

22/04/20

ಆಯುಕ್ತರು, ಗ್ರಾಮೀಣಾಭಿವೃದ್ಧಿ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

**ರವರಿಗೆ:**

ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯತಿಗಳ
ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ

**ಪ್ರತಿಯನ್ನು:**

1. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
2. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು(ಪಂಚಾಯತ್ ರಾಜ್), ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
3. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಕೌಶಲ್ಯಾಭಿವೃದ್ಧಿ, ಉದ್ಯಮ ಶೀಲತೆ ಮತ್ತು ಜೀವನೋಪಾಯ ಇಲಾಖೆ, ಬೆಂಗಳೂರು.
4. ಅಭಿಯಾನ ನಿರ್ದೇಶಕರು, ರಾಷ್ಟ್ರೀಯ ಜೀವನೋಪಾಯ ಅಭಿಯಾನ ಬೆಂಗಳೂರು.
5. ಆಯುಕ್ತರು, ಪಂಚಾಯತ್ ರಾಜ್ , ಪಂಚಾಯತ್ ರಾಜ್ ಆಯುಕ್ತಾಲಯ ಬೆಂಗಳೂರು.
6. ನಿರ್ದೇಶಕರು, ಸಾಮಾಜಿಕ ಪರಿಶೋಧನಾ ನಿರ್ದೇಶನಾಲಯ, ಶೇಷಾದ್ರಿಪುರಂ, ಬೆಂಗಳೂರು.
7. ಮುಖ್ಯ ಕಾರ್ಯಾಚರಣೆ ಅಧಿಕಾರಿ, ಗ್ರಾಮೀಣಾಭಿವೃದ್ಧಿ ಆಯುಕ್ತಾಲಯ.
8. ಮುಖ್ಯ ಆರ್ಥಿಕ ಸಲಹೆಗಾರರು, ಗ್ರಾಮೀಣಾಭಿವೃದ್ಧಿ ಆಯುಕ್ತಾಲಯ.
9. ಜಂಟಿ ನಿರ್ದೇಶಕರು(ಆಡಳಿತ/ತಾಂತ್ರಿಕ/ತೋಟಗಾರಿಕೆ), ಗ್ರಾಮೀಣಾಭಿವೃದ್ಧಿ ಆಯುಕ್ತಾಲಯ.
10. ಸಹಾಯಕ ನಿರ್ದೇಶಕರು (ಆಡಳಿತ/ತಾಂತ್ರಿಕ/ಎಂಐಎಸ್/ಒಗ್ಗೂಡಿಸುವಿಕೆ), ಗ್ರಾಮೀಣಾಭಿವೃದ್ಧಿ ಆಯುಕ್ತಾಲಯ.
11. ರಾಜ್ಯದ ಎಲ್ಲಾ ತಾಲ್ಲೂಕು ಪಂಚಾಯತಿಗಳ ಕಾರ್ಯನಿರ್ವಾಹಕ ಅಧಿಕಾರಿಗಳು.
12. ರಾಜ್ಯದ ಎಲ್ಲಾ ಗ್ರಾಮ ಪಂಚಾಯತಿಗಳ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳು.
13. ಕಛೇರಿ ಪ್ರತಿ.

Scanned with CamScanner

# ಅನುಬಂಧ

## 2022-23ನೇ ಸಾಲಿನಲ್ಲಿ ಸಂಜೀವಿನಿ ಸ್ವ-ಸಹಾಯ ಗುಂಪಿನ ಒಕ್ಕೂಟಗಳಿಗೆ ಕಾಮನ್ ವರ್ಕ್ ಶೆಡ್ ನಿರ್ಮಾಣ ಮಾಡಲು ನಿಗದಿಪಡಿಸಿರುವ ಗುರಿ

| ಕ್ರ.ಸಂ | ಜಿಲ್ಲೆಗಳು | ಒಟ್ಟು ತಾಲ್ಲೂಕುಗಳು | ಒಟ್ಟು ಗ್ರಾಮ ಪಂ.ಸಂಖ್ಯೆ | ಜಿಲ್ಲಾವಾರು ನಿಗದಿಪಡಿಸಿದ ಗುರಿ |
|---|---|---|---|---|
| 1 | ಬಾಗಲಕೋಟೆ | 7 | 196 | 28 |
| 2 | ಬಳ್ಳಾರಿ | 5 | 100 | 20 |
| 3 | ಬೆಂಗಳೂರು (ನ) | 4 | 101 | 16 |
| 4 | ಬೆಂಗಳೂರು(ಗ್ರಾ) | 5 | 88 | 20 |
| 5 | ಬೆಳಗಾವಿ | 14 | 498 | 40 |
| 6 | ಬೀದರ್ | 7 | 185 | 21 |
| 7 | ಬಿಜಾಪುರ(ವಿಜಯಪುರ) | 12 | 211 | 24 |
| 8 | ಚಾಮರಾಜನಗರ | 5 | 130 | 20 |
| 9 | ಚಿಕ್ಕಬಳ್ಳಾಪುರ | 7 | 157 | 25 |
| 10 | ಚಿಕ್ಕಮಗಳೂರು | 8 | 226 | 24 |
| 11 | ಚಿತ್ರದುರ್ಗ | 6 | 189 | 24 |
| 12 | ದಕ್ಷಿಣ ಕನ್ನಡ | 7 | 223 | 28 |
| 13 | ದಾವಣಗೆರೆ | 6 | 196 | 24 |
| 14 | ಧಾರವಾಡ | 9 | 144 | 25 |
| 15 | ಗದಗ | 7 | 122 | 31 |
| 16 | ಕಲ್ಬುರ್ಗಿ | 11 | 261 | 25 |
| 17 | ಹಾಸನ | 8 | 267 | 24 |
| 18 | ಹಾವೇರಿ | 8 | 223 | 24 |
| 19 | ಕೊಡಗು | 6 | 104 | 12 |
| 20 | ಕೋಲಾರ | 5 | 156 | 20 |
| 21 | ಕೊಪ್ಪಳ | 6 | 153 | 30 |
| 22 | ಮಂಡ್ಯ | 7 | 233 | 28 |
| 23 | ಮೈಸೂರು | 8 | 257 | 32 |
| 24 | ರಾಯಚೂರು | 7 | 178 | 28 |
| 25 | ರಾಮನಗರ | 5 | 126 | 20 |
| 26 | ಶಿವಮೊಗ್ಗ | 7 | 266 | 28 |
| 27 | ತುಮಕೂರು | 10 | 330 | 33 |
| 28 | ಉಡುಪಿ | 6 | 155 | 12 |
| 29 | ಉತ್ತರ ಕನ್ನಡ | 11 | 229 | 22 |
| 30 | ವಿಜಯನಗರ | 6 | 137 | 24 |
| 31 | ಯಾದಗಿರಿ | 6 | 122 | 18 |
| | **ಜಿಲ್ಲೆಗಳು** | **226** | **5963** | **750** |

ಆಯುಕ್ತರು, ಗ್ರಾಮೀಣಾಭಿವೃದ್ಧಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

Scanned with CamScanner